**ಅ. ದಾ. ಸಂ. ಃ 81/2021**
**ಪಿ.ಡಬ್ಲ್ಯೂ ಃ 01 ವಿಜಯಲಕ್ಷ್ಮೀ**

**ದಿನಾಂಕ ಃ 10.01.2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು ಃ- ಪ್ರತಿವಾದಿಯ ಪರ ಶ್ರೀ. ಎಸ್ ಜಿ ಆರ್. ವಕೀಲರಿಂದ ಃ-**

ದಾವೆಯನ್ನು ಯಾವ ಸರ್ವೆ ನಂಬರ್ ಗೆ ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ 65/3 ಎಂದು ನುಡಿಯುತ್ತಾರೆ. ನಿಪಿ-8 ರಿಂದ 17 ರ ತೆರಿಗೆ ಪಾವತಿ ರಸೀದಿಗಳು ಸಶವೆ ನಂ.65/3 ರ ಸ್ವತ್ತಿಗೆ ಸಂಬಂಧಪಟ್ಟಂತೆ ತೆರಿಗೆ ಪಾವತಿ ಮಾಡಿದ ರಸೀದಿಗಳು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಕುಟುಂಬದಲ್ಲಿ ಯಾರ ಹೆಸರೂ ಚಂದನ್ ಎಂದು ಇರುವುದಿಲ್ಲ ವೆಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಪಿ-22 ರಿಂದ 24 ರಲ್ಲಿ ಇರುವ ಚಂದನ್ ಎಂದು ಇರುವುದು ಯಾರು ಎಂದರೆ ಸಾಕ್ಷಿ ಅವರ ಸೊಸೆ ಚೈತ್ರ ಎಂದು ಇದ್ದಾರೆ ಅವರು ಇರಬೇಕು ಚಂದನ್ ಎಂದು ಯಾರೂ ಇರುವುದಿಲ್ಲವೆಂದು ನುಡಿಯುತ್ತಾರೆ. ಸದರಿ ನಿಪಿ-22 ರಿಂದ 24 ರ ಲ್ಲಿ ಚೈತ್ರ ಎಂದು ಇರುವುದಿಲ್ಲ ಚಂದನ್ ಎಂದು ಇದೆ ಎಂದರೆ ಸಾಕ್ಷಿ ಅವರ ಮೊಮ್ಮಗ ಇರಬಹುದೇನೋ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ಚಂದನ್ ಎಂದು ಯಾವುದೇ ಮೊಮ್ಮಗ ಇರುವುದಿಲ್ಲವೆಂದರೆ ಸಾಕ್ಷಿ ನಾವು ಆಸ್ತಿಯನ್ನು ಕೊಳ್ಳುವಾಗ ಚಂದನ್ ಯಾರು ಎಂದು ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ಈಗಲೂ ಚಂದನ್ ಯಾರು ಎಂದು ಗೊತ್ತಿರುವುದಿಲ್ಲ.

ನಿಪಿ-1 ರ ಕ್ರಯಪತ್ರ ಆಗುವ ಎಷ್ಟು ದಿನಗಳ ಮುಂಚೆ ಸದರಿ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಮಾತುಕತೆಯಾಗಿತ್ತು ಎಂದರೆ ಸಾಕ್ಷಿ ನಿಖರವಾಗಿ ಗೊತ್ತಿರುವುದಿಲ್ಲ ಆದರೆ ಸದರಿ ಕ್ರಯಪತ್ರ ಆಗುವ 2 ತಿಂಗಳು ಮುಂಚೆ

ಮಾತುಕತೆಯಾಗಿತ್ತು ಎಂದು ನುಡಿಯುತ್ತಾರೆ. ಸದರಿ ನಿಪಿ-1 ರಲ್ಲಿ ನಮೂದಿಸಿರುವ ಸ್ವತ್ತನ್ನು ನಿಮಗೆ ಯಾರು ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ನರಸಮ್ಮ ರವರು ತೋರಿಸಿದ್ದು ಆ ಸಮಯದಲ್ಲಿ ನಾನು ಮತ್ತು ನನ್ನ ಯಜಮಾನರು ಇದ್ದೆವು ಎಂದು ನುಡಿಯುತ್ತಾರೆ. ಸದರಿ ನಿಪಿ-1 ರಲ್ಲಿ ಇರುವ ಸ್ವತ್ತನ್ನು ತೋರಿಸಿದಾಗ ದಾಖಲೆ ಏನಾದರೂ ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿ ನಾವು ಕೇಳಿದಾಗ ಪಹಣಿಯನ್ನು ಕೊಟ್ಟಿದ್ದರು ಅದನ್ನು ಪರಿಶೀಲನೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಿಮಗೆ ಯಾವ ಪಹಣಿಯನ್ನು ಕೊಟ್ಟಿದ್ದರು ಸದರಿ ಪಹಣಿಯಲ್ಲಿ ಇದ್ದ ಸ್ವತ್ತಿಗೆ ಸಂಬಂಧಪಟ್ಟಂತೆ ಹಾಗೂ ನಿಮಗೆ ಯಾವ ಆಸ್ತಿಯನ್ನು ತೋರಿಸಿದ್ದರು ಅದೇ ಆಸ್ತಿಗೆ ಕ್ರಯಪತ್ರವನ್ನು ಬರೆದುಕೊಟ್ಟಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮಗೆ ನಿಪಿ-1 ರ ಕ್ರಯಪತ್ರವನ್ನು ಬರೆದುಕೊಡುವ ದಿನ ಸದರಿ ನಿಪಿ-1 ರಲ್ಲಿ ಇರುವ ಸ್ವತ್ತಿನ ಖಾತೆ 1 ನೇ ಪ್ರತಿವಾದಿ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ನಿಪಿ-1 ರ ಕ್ರಯಪತ್ರವನ್ನು ಬರೆದುಕೊಟ್ಟ ನಂತರ ಸದರಿ ನಿಪಿ-1 ರಲ್ಲಿರುವ ಸ್ವತ್ತಿನ ಸ್ವಾಧೀನವನ್ನು ಬಿಟ್ಟುಕೊಟ್ಟಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-1 ರ ಕ್ರಯಪತ್ರದ ಪ್ರಕಾರ ಸದರಿ ಕ್ರಯಪತ್ರದ ಸ್ವತ್ತಿಗೆ ನಿಮ್ಮ ಹೆಸರಿಗೆ ನಿಪಿ-2 ರಂತೆ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ನಿಪಿ-2 ರ ಮ್ಯುಟೇಷನ್ ಪ್ರಕಾರ ನಿಮ್ಮ ಹೆಸರಿಗೆ ನಿಪಿ-3 ರಂತೆ ಪಹಣಿಯೂ ಬಂದಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಪ್ರತಿವಾದಿಗಳು ಹಾಜರಾಗಿ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-5 ಮತ್ತು 7 ರಲ್ಲಿ ತಿಮ್ಮಣ್ಣ, ಗೋವಿಂದಯ್ಯ ಬಿನ್ ವೆಂಕಟರಮಣಯ್ಯ,

ವೆಂಕಟರಮಾಣಯ್ಯ - ಹನುಮಂತಯ್ಯ ಮೇಲಿನ ಜಂಟಿ ಎಂದು ಖಾತೆ ಇದೆ ಎಂದರೆ ಸಾಕ್ಷಿ ಸದರಿ ನಿಪಿ-5 ಮತ್ತು 7 ಅನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ಸದರಿ ನಿಪಿ-5 ಮತ್ತು 7 ರಲ್ಲಿರುವ ತಿಮ್ಮಣ್ಣರವರ ಕುಟುಂಬದವರು, ವಿಂದಯ್ಯ ಬಿನ್ ವೆಂಕಟರಮಣಯ್ಯರವರ ಕುಟುಂಬದವರು, ವೆಂಕಟರಮಾಣಯ್ಯ ಕುಟಂಬದವರು ಹಾಗೂ ಹನುಮಂತಯ್ಯರವರ ಕುಟುಂಬದವರು ಪೂರ್ತಿ ಬಂದು ನಿಪಿ-1ರ ಕ್ರಯಪತ್ರವನ್ನು ಬರೆದು ಕೊಟ್ಟಿರುವುದಿಲ್ಲವೆಂದರೆ ಸಾಕ್ಷಿ ಅದು ನರಸಮ್ಮರವರ ಜಮೀನು ಆಗಿದ್ದು ಅವರು ಮಾತ್ರ ಬರೆದುಕೊಟ್ಟಿರುತ್ತರೆ ಎಂದು ನುಡಿಯುತ್ತಾರೆ. ನಿಪಿ-5 ಮತ್ತು 7 ರ ಪಹಣಿಯಲ್ಲಿರುವ ಸ್ವತ್ತು ಹಾಗೂ ನರಸಮ್ಮ ರವರ ಸ್ವತ್ತು ಬೇರೆ ಬೇರೆ ಹಾಗೂ ಸದರಿ ನಿಪಿ5 ಮತ್ತು 7 ರಲ್ಲಿ ನರಸಮ್ಮರವರ ಹೆಸರು ಇರುವುದಿಲ್ಲವೆಂದರೆ ಸಾಕ್ಷಿಯು ಸದರಿ ನಿಪಿ-5 ಮತ್ತು ಅನ್ನು ನೋಡಿ ನರಸಮ್ಮರವರ ಹೆಸರು ಇರುವುದಿಲ್ಲ ಆದರೆ ಸದರಿ ನಿಪಿ-5 ಮತ್ತು 7 ರಲ್ಲಿ ಇರುವ ಸ್ವತ್ತು ಅವರದ್ದೇ ಎಂದು ನುಡಿಯುತ್ತಾರೆ. ನಿಪಿ-5 ಮತ್ತು 7 ರಲ್ಲಿ ಇರುವ ಸ್ವತ್ತು ನರಸಮ್ಮರವರದ್ದು ಎಂದು ಹೇಳಲು ಬೇರೆ ಯಾವ ದಾಖಲೆಗನ್ನು ನೋಡಿರುತ್ತೀರಿ ಎಂರದೆ ಸಾಕ್ಷಿ ಬೇರೆ ದಾಖಲೆಗಳನ್ನು ನೋಡಿರುವುದಿಲ್ಲವೆಂದು ನುಡಿಯುತ್ತೆ.

ನಿಪಿ-5 ಮತ್ತು 7 ರಲ್ಲಿ ಇರುವಂತಹ ತಿಮ್ಮಣ್ಣ, ಗೋವಿಂದಯ್ಯ , ವೆಂಕಟನರಸಯ್ಯ ಮತ್ತು ಹನುಮಂತಯ್ಯರವರ ಹೆಂಡತಿಯ ಹೆಸರು ಹಾಗೂ ಅವರಿಗೆ ಎಷ್ಟು ಮಕ್ಕಳು ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿಯವರು ಯಾವ ಕುಟುಂಬದವರು ಹಾಗು ಅವರ ಕುಟುಂಬದ ಹಿನ್ನೆಲೆ ಏನು ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಅದರ ಅವಶ್ಯಕತೆ ನನಗೆ ಇರುವುದಿಲ್ಲ ವೆಂದು ನುಡಿಯುತ್ತಾರರೆ . ಸದರಿ ನಿಪಿ-5 ಮತ್ತು 7 ರಲ್ಲಿ ಇರುವ ದಾವಾಸ್ವತ್ತಿನ ಬಿ ಶೆಡ್ಯೂಲ್ ಗೆ

ಸಂಬಂಧಪಟ್ಟಂತೆ ಸದರಿ ತಿಮ್ಮಣ್ಣ, ಗೋವಿಂದಯ್ಯ ಬಿನ್ ವೆಂಕಟರಮಣಯ್ಯ, ವೆಂಕಟರಮಾಣಯ್ಯ - ಹನುಮಂತಯ್ಯ ರವರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲವೆಂದರೆ ಸಾಕ್ಷಿಯು ಹೌದು ಮಾಡಿರುವುದಿಲ್ಲವೆಂದು ನುಡಿಯುತ್ತಾರೆ. ಸದರಿ ನಿಪಿ-5 ಮತ್ತು 7 ರ ಸ್ವತ್ತಿಗೆ ತಿಮ್ಮಣ್ಣ, ಗೋವಿಂದಯ್ಯ ಬಿನ್ ವೆಂಕಟರಮಣಯ್ಯ, ವೆಂಕಟರಮಾಣಯ್ಯ - ಹನುಮಂತಯ್ಯ ರವರೆ ಸ್ವಾಧೀನದಾರರು ಮತ್ತು ಹಕ್ಕುದಾರರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ದಿನಾಂಕ 23.03.2021 ರಂದು ಪ್ರತಿವಾದಿಗಳಿಗೆ ನಿಪಿ-18 ರಂತೆ ನೋಟೀಸ್ ? ಕಳುಹಿಸಿರುತ್ತೇನೆ ಎಂದು ಹೇಳಿದ್ದು ಸದರಿ ನೊಟೀಸನ್ನು ತಿಮ್ಮಣ್ಣ, ಗೋವಿಂದಯ್ಯ ಬಿನ್ ವೆಂಕಟರಮಣಯ್ಯ, ವೆಂಕಟರಮಾಣಯ್ಯ - ಹನುಮಂತಯ್ಯ ರವರಿಗೆ ಕಳುಹಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ನಿಪಿ-1 ರ ಕ್ರಯಪತ್ರದಂತೆ ದಾವಾಸ್ವತ್ತಿನ ಎ ಶಡ್ಯೂಲ್ ಸ್ವತ್ತಿನ ಮಾಲೀಕರು ಆಗಿದ್ದರೂ ಕೂಡ ಸದರಿ ತಿಮ್ಮಣ್ಣ, ಗೋವಿಂದಯ್ಯ ಬಿನ್ ವೆಂಕಟರಮಣಯ್ಯ, ವೆಂಕಟರಮಾಣಯ್ಯ, ಹನುಮಂತಯ್ಯ ರವರ ದಾವಾಸ್ವತ್ತಿನ ಬಿ ಶೆಡ್ಯೂಲ್ ಅನ್ನು ಲಪಟಾಯಿಸಲು ದುರುದ್ದೇಶದಿಂದ ಸುಳ್ಳು ಸಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹಳುತಿತದ್ದೀರಿ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ನೀವು ನೀಡಿರುವ ಕಾನೂನು ತಿಳುವವಳಿಕೆ ಜಾರಿಯಾಗಿರವುದಿಲ್ಲ ಸದರಿ ನೋಟೀಸ್ ?ಜಾರಿಯಾಗಿರುತ್ತದೆ ಎಂದು ಸುಳ್ಳು ಅಕ್ನಾಲೆಡ್ಜ್ಮೆಂಟ್ ಅನ್ನು ನಿಪಿ-22 ರಿಂದ 24 ರಂತೆ ಸೃಷ್ಟಿಸಿ ಸುಳ್ಳು ವ್ಯಾಜ್ಯ ಕಾರಣನ್ನು ಸೃಷ್ಟಿಸಿ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಇರಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ. ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ಸಿ. ಜ. ಮತ್ತು ಜೆ. ಎಂ. ಎಫ್? ಸಿ. ಮಾಗಡಿ.**